ಮಲೆನಾಡು
ತಾಂತ್ರಿಕ
ಮಹಾವಿದ್ಯಾಲಯ

ಎಂಸಿಇ/ಡೀನ್-ಎಸ್ಎ/ಗ್ರೂಪಆಇ/2025-26

ದಿನಾಂಕ: 10.12.2025

# ಸುತ್ತೋಲೆ

ಈ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ **3852** ವಿದ್ಯಾರ್ಥಿಗಳು, ಹಾಗೂ ಅವರ ಒಬ್ಬ ಪೋಷಕರು, ವಿದ್ಯಾಲಯದ ಎಲ್ಲಾ **397** ಬೋಧಕ /ಬೋಧಕೇತರ ನೌಕರರುಗಳಿಗೆ ವೈಯುಕ್ತಿಕ ಅಪಘಾತ ಸಮೂಹ ಜೀವ ವಿಮೆ ಯೋಜನೆಯ ಅನುಕೂಲವನ್ನು (ಗ್ರೂಪ್ ಪರ್ಸನೆಲ್ ಆಕ್ಸಿಡೆಂಟ್ ಸ್ಕಿಂನ್ನು) ಕಾಲೇಜಿನ ವತಿಯಿಂದ ಜಾರಿಗೊಳಿಸಿದೆ.

2025-26ನೇ ಸಾಲಿನಲ್ಲಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ, ಲಿಮಿಟೆಡ್, ಹಾಸನ ಇವರಿಂದ ಪಾಲಿಸಿ ಸಂಖ್ಯೆ **67240148242300000005 /67240148242300000006** ಯಂತೆ ಪಡೆಯಲಾಗಿದೆ. ಈ ವಿಮಾ ಸೌಲಭ್ಯವು ದಿನಾಂಕ **18.03.2025** ರಿಂದ **17.03.2026** ರವರೆಗೆ ಜಾರಿಯಲ್ಲಿರುತ್ತದೆ.ವಿದ್ಯಾರ್ಥಿ, ಮತ್ತು ಅವರ ಒಬ್ಬ ಪಾಲಕರು, ಸಿಬ್ಬಂದಿ ಮತ್ತು ಅವರ ಒಬ್ಬ ನಾಮ ನಿರ್ದೇಶಿತ ಸದಸ್ಯರು ಸೇರಿದಂತೆ ಅಪಘಾತವಾದಾಗ, ಹೊರರೋಗಿಯಾಗಿ ಚಿಕಿತ್ಸೆ ಪಡೆದಲ್ಲಿಗರಿಷ್ಠ ರೂ. **10,000.00** ಗಳು ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ. **1,00,000./-** ತನಕ ವೈದ್ಯಕೀಯ ವೆಚ್ಚ ಮರುಪಾವತಿಯ ಸೌಲಭ್ಯವನ್ನು ಕಂಪನಿಯಿಂದ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಅಪಘಾತದಲ್ಲಿ ಮರಣ ಹೊಂದಿದ್ದರೆ ರೂ. **3,00,000./-**ಗಳ ವಿಮಾ ಮೊತ್ತವನ್ನು ನಾಮ ನಿರ್ದೇಶಿತ ಸದಸ್ಯರು ಪಡೆಯಬಹುದು. ಈ ಸಮೂಹ ವೆಚ್ಚ ಮರುಪಾವತಿ ವಿಮಾ ಸೌಲಭ್ಯವು ಅಪಘಾತವಾದ ನಂತರ ಪಡೆದ ಚಿಕಿತ್ಸೆಗೆ ಮಾತ್ರ ಒಳಪಡುತ್ತದೆ. ಈ ಕೆಳ ಕಾಣಿಸಿದ ವಿವಿಧ ಅಪಘಾತಗಳಿಗೆ ಸಮೂಹ ಜೀವ ವಿಮಾ ಲಭ್ಯವಿರುತ್ತದೆ. ವಿಮಾ ಪಾಲಿಸಿಯ ವಿವರವನ್ನು ಕಾಲೇಜಿನ ವೆಬ್ ವಿಳಾಸದಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗೆ ಡೀನ್ ಎಸ್.ಎ ವಿಭಾಗದ ಅಧೀಕ್ಷಕರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

1) ಕೆಲಸದ ವೇಳೆಯಲ್ಲಿ, ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದಾಗ ಅಥವಾ ಮನೆಯಿಂದ ಕಛೇರಿಗೆ ಬರುವಾಗ ವಾಹನಗಳಿಂದ ಅಪಘಾತವಾದಾಗ, ಮತ್ತು ಆಕಸ್ಮಿಕವಾಗಿ ಬಿದ್ದು ಅಪಘಾತವಾದಾಗ,
2) ದೋಣಿ/ಹಡಗು ಮುಳುಗಿದಾಗ/ಮನೆಯಲ್ಲಿ ಅಥವಾ ರಸ್ತೆ /ರೈಲು /ವಿಮಾನದಲ್ಲಿ ಅಪಘಾತವಾದಾಗ.
3) ಈಜಲು ಹೋಗಿ ಮುಳುಗಿದಾಗ
4) ವಿದ್ಯುತ್ ಅಪಘಾತದಿಂದ 5) ಪ್ರಾಕೃತಿಕ ವಿಕೋಪದಿಂದ
6) ಬೆಂಕಿ ಅಪಘಾತದಲ್ಲಿ ಸುಟ್ಟ ಗಾಯಗಳಿಗೆ 7) ತುಳಿತಕ್ಕೆ ಸಿಕ್ಕಿಕೊಂಡಾಗ
8) ಕಟ್ಟಡ/ಮನೆ ಕುಸಿದು ಬಿದ್ದಾಗ 9) ಆಕಸ್ಮಿಕವಾಗಿ ನಾಯಿ/ಹಾವು ಕಚ್ಚಿದಾಗ ಮುಂತಾದ ಅಪಘಾತಗಳಿಂದ

ಪ್ರಾಂಶುಪಾಲರು

ಪ್ರತಿಯನ್ನು:-

1) ಪ್ರಾಂಶುಪಾಲರ ಮೇಜಿಗೆ
2) ನಿರ್ದೇಶಕರ ಮಾಹಿತಿಗಾಗಿ
3) ಎಲ್ಲಾ ಡೀನ್‌ರವರ ಮಾಹಿತಿಗಾಗಿ
4) ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ. ಈ ವಿಷಯವನ್ನು ವಿಭಾಗದ ಎಲ್ಲಾ ನೌಕರರುಗಳಿಗೆ ಗಮನಕ್ಕೆ ತಂದು, ವಿದ್ಯಾರ್ಥಿಗಳ ಗಮನಕ್ಕೆ ತರಲು ಪ್ರಕಟಣಾ ಫಲಕದಲ್ಲಿ ಸೂಚಿಸಲಾಗಿದೆ.
5) ರಿಜಿಸ್ಟ್ರಾರ್‌ರವರ ಗಮನಕ್ಕಾಗಿ
6) ಎಲ್ಲಾ ಅಧೀಕ್ಷಕರುಗಳ ಗಮನಕ್ಕಾಗಿ
7) ಕಛೇರಿ ಪ್ರತಿ
8) ನೆಟ್‌ವರ್ಕ್ ಅಡ್ಮಿನಿಸ್ಟ್ರೇಟರ್-ಈ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲು ಕೋರಲಾಗಿದೆ.